ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
<u>ಸಿ.ಸಿ.ನಂ.**2869/2025**</u>

ದಿನಾಂಕಃ**17.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ನಂಜುಂಡಪ್ಪ | ಚಾಸಾ-1,<br>ಪ್ರಾಸಾ-2 |
| ತಂದೆಯ ಹೆಸರು | ತಿಮ್ಮಯ್ಯ | |
| ವಯಸ್ಸು | 38 ವರ್ಷ | |
| ಉದ್ಯೋಗ | ಕೂಲಿ ಕೆಲಸ | |
| ವಾಸ | ಲಕ್ಷ್ಮೀಪುರ ಗ್ರಾಮ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಮೃತ ರಾಜು ನನ್ನ ಮಗ. ಚಾಸಾ 2 ರಿಂದ 4 ರವರ ಪರಿಚಯವಿದೆ. ಸುಮಾರು 1 ವರ್ಷದ ಹಿಂದೆ ಕಡೂರಿನಿಂದ ಮುಂದೆ ಪೆಟ್ರೋಲ್ ಬಂಕ್ ಸಮೀಪ ಮಧ್ಯಾಹ್ನ ಸು.2 ರಿಂದ 2.30 ರಲ್ಲಿ ನನ್ನ ಮಗನಿಗೆ ಡಸ್ಟರ್ ಕಾರೊಂದು ಅಪಘಾತ ಮಾಡಿದ್ದು, ಅದರಿಂದ ಗಾಯಗೊಂಡಿದ್ದ ನನ್ನ ಮಗನನ್ನು ನಮ್ಮ ಊರಿನವರು ಕಡೂರು ಸ.ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಸದರಿಯವರು ಹೆಚ್ಚಿನ ಚಿಕಿತ್ಸೆಗೆ ಹಾಸನಗೆ ಹೋಗುವಂತೆ ಹೇಳಿದ್ದು, ನಾವು ಹಾಸನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗ ಚಿಕಿತ್ಸೆಗೆ ಸ್ಪಂದಿಸದೆ ಮರಣಹೊಂದಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ</u>-

ದಿಃ10.03.2025 ರಂದು ನನ್ನ ಮಗ ರಾಜು ಸಂಜೆ 7.30 ರ ಸಮಯದಲ್ಲಿ ಕೆ ಎ 66 ಹೆಚ್ 3126 ರ ಸ್ಪ್ಲೆಂಡರ್ ಮೊಟರ್ ಸೈಕಲ್ ನಲ್ಲಿ ಕಡೂರಿನಿಂದ ಲಕ್ಷ್ಮೀಪುರಕ್ಕೆ ಬರುತ್ತಿದ್ದಾಗ ಚಿಕ್ಕಮಗಳೂರು ಕಡೆಯಿಂದ ಕಡೂರು ಕಡೆಗೆ ಡಸ್ಟರ್ ವಾಹನ ಸಂ.ಕೆಎ 18 ಪಿ 8707 ರ ಚಾಲಕ ಅತೀ ವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ನನ್ನ ಮಗ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದ ವಾಹನಕ್ಕೆ ಬಲಭಾಗಕ್ಕೆ ಬಂದು

ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿ. ಸದರಿ ಅಪಘಾತದ ವಿಚಾರವನ್ನು ಚಾಸಾ 4 ರವರು ಚಾಸಾ9 ರವರಿಗೆ ಕರೆ ಮಾಡಿ ತಿಳಿಸಿದ್ದರು ಎಂದರೆ ಸರಿ. ನಂತರ ನಾನು, ಚಾಸಾ 8, 9 ರವರು ಕಡೂರು ಆಸ್ಪತ್ರೆಗೆ ಹೋಗಿ ನೋಡಿದಾಗ ರಾಜು ವಿಗೆ ಮುಖ, ತಲೆ ಮತ್ತು ಬಲಗಾಲಿ ಗೆ ತೀವ್ರ ಪೆಟ್ಟಾಗಿತ್ತು ಎಂದರೆ ಸರಿ. ಸದರಿ ಪೆಟ್ಟಿನಿಂದ ರಾತ್ರಿ ಸು.11.30 ಕ್ಕೆ ಮೃತಪಟ್ಟನು ಎಂದರೆ ಸರಿ.

ಸದರಿ ಅಪಘಾತ ಬಗ್ಗೆ ನಾನು ದಿಃ11.03.2025 ರಂದು ದೂರು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ದೂರನ್ನು ನಿಪಿ 12 ಎಂದು ಗುರುತಿಸಲಾಯಿತು. ಆದರೆ ಸಹಿಯು ಹೆಬ್ಬೆಟ್ಟಿನ ಸಹಿ ಆಗಿರುವುದರಿಂದ ಗುರುತಿಸಲು ನಿರಾಕರಿಸಲಾಯಿತು.

ಸದರಿ ಅಪಘಾತಪಡಿಸಿದ ಕಾರಿನ ಚಾಲಕನ ಹೆಸರು ರಾಜಶೇಖರಪ್ಪ ಎಂದು ನನಗೆ ತಿಳಿದುಬಂದು ಅದರಂತೆ ನಾನು ದಿಃ15.07.2025 ರಂದು ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಹೆಚ್ ಆರ್ ವಕೀಲರಿಂದಃ</u>-

ಆರೋಪಿ ಪರ ವಕೀಲರು ಸಮಯವಕಾಶ ಕೋರಿದ್ದು, ಆದರೆ ಪ್ರಕರಣಗಳನ್ನು ಸಾಕ್ಷಿ ಬಂದ ದಿನವೇ ಪಾಟೀ ಸವಾಲು ಮಾಡುವ ನಿಯಮವಿದ್ದಾಗಿಯೂ ಸೂಕ್ತ ಕಾರಣ ನೀಡದೆ ಕಾಲವಕಾಶ ಕೋರಿರುವುದು ಸಮಂಜಸವಲ್ಲವೆಂದು ಪರಿಗಣಿಸಿ ಮನವಿಯನ್ನು ತಿರಸ್ಕರಿಸಲಾಯಿತು ಹಾಗೂ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.